Setting up of Electronic Industries in Tumkur:

3742 - Sri K.Lakkappa (Kunigal): Will the Minister for Large and Medium Industries be pleased to state.

a) *Number of Electronic Industries both in Medium and Large Scale and SSI Sector in Tumkur district;*

b) *Out of this number, the number of them in Public, Private and Joint Sector;*

c) *Whether there is any proposal to set up more electronic industries with Japanese assistance in Tumkur;*

d) *If so, the number of such Electronic Industries proposed to be started?*

Smt. Monorama Madhvaraj (Minister For Large & Medium Industries.)

a) SSI - 15 Nos.
Large & Medium - 1

b) All 15 Small Scale Industries are in Private sector. One Medium Scale Industry is Public Limited Company.

c) There is no such proposal.

d) Does not arise.

ತುಮಕೂರಿನಲ್ಲಿ ಅಪಘಾತ ಮತ್ತು ಪುನರ್ನಿವೇಶನ ಸಂಸ್ಥೆಯನ್ನು ಪ್ರಾರಂಭಿಸುವ ಪ್ರಸ್ತಾವ.

3743 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಂಜಯ ಗಾಂಧೀ ಅಪಘಾತ ಪುನರ್ನಿವೇಶನ ಮತ್ತು ಶಾರೀರಿಕ ಔಷಧ ಸಂಸ್ಥೆ, ಬೆಂಗಳೂರಿನಂತೆ ತುಮಕೂರಿನಲ್ಲಿ ಅಪಘಾತ ಮತ್ತು ಪುನರ್ನಿವೇಶನ ಸಂಸ್ಥೆಯನ್ನು ತೆರೆಯುವ ಪ್ರಸ್ತಾಪ ಇದೆಯೆ?*

ಆ) *ಇಲ್ಲದ ಪಕ್ಷದಲ್ಲಿ ಸರ್ಕಾರವೇ ಈ ಬಗ್ಗೆ ಕ್ರಮ ತೆಗೆದುಕೊಂಡು ತುಮಕೂರಿನಲ್ಲಿ ಅಪಘಾತ ಸಂಸ್ಥೆಯನ್ನು ಪ್ರಾರಂಭಿಸಿದರೆ, ಇದರಿಂದ ಅನೇಕ ಜೀವಗಳನ್ನು ಉಳಿಸುವ ಸಾಧ್ಯತೆವಿದೆಯಲ್ಲ?*

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ.

ಆ) ಸಂಜಯ ಗಾಂಧಿ ಅಪಘಾತ ಪುನರ್ನಿವೇಶನ ಮತ್ತು ಶಾರೀರಿಕ ಔಷಧ ಸಂಸ್ಥೆ, ಬೆಂಗಳೂರು ಈ ಸಂಸ್ಥೆಯು ಬೆಂಗಳೂರು ಆಸುಪಾಸಿನಲ್ಲಿರುವ ವೈದ್ಯರುಗಳಿಗೆ ಅಪಘಾತಗೊಂಡವರಿಗೆ ಶುಶ್ರೂಷೆ ಕೊಡುವ ದಿಸೆಯಲ್ಲಿ ತರಬೇತಿ ನೀಡಲಾಗುವುದು. ಬೆಂಗಳೂರಿನ ವಿವಿದೆಡೆಯಲ್ಲಿ. ಗಾಯಾಳುಗಳ ಶುಶ್ರೂಷೆಗಾಗಿ ತುರ್ತುವಾಹನದ ಸೌಲಭ್ಯದ ಅವಕಾಶವನ್ನು ನೀಡುವ ಯೋಜನೆ ಈ ಸಂಸ್ಥೆಗೆ ಇದೆ. ಇನ್ನು ಆರು ತಿಂಗಳ ಕಾಲಾವಕಾಶದಲ್ಲಿ ಸಂಜಯಗಾಂಧಿ ಅಪಘಾತ ಪುನರ್ನಿವೇಶನ ಮತ್ತು ಶಾರೀರಿಕ ಔಷಧ ಸಂಸ್ಥೆ ಸಹಭಾಗಿತ್ವದಲ್ಲಿ ಮತ್ತು ಇತರೆ ಸಾರ್ವಜನಿಕ ಆಸ್ಪತ್ರೆಗಳ ನೆರವಿನಿಂದ ತುಮಕೂರಿನಲ್ಲೂ ಈ ಸೌಲಭ್ಯ ವಿಸ್ತರಿಸುವ ಯೋಜನೆ ಇದೆ

ವೃದ್ಧ ಅನಾಥರಿಗೆ ಆಶ್ರಯ ಒದಗಿಸುವ ಬಗ್ಗೆ.

3727-ಶ್ರೀ ಡೆರಿಕ್ ಎಂ.ಬಿ. ಫುಲಿನ್ ಫೋ,(ನಾಮನಿರ್ದೇಶನ ಹೊಂದಿದವರು): ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಮಾಜ ಕಲ್ಯಾಣ ಇಲಾಖೆಯು ಸಮಾಜದ ಅನಾಥ ವಯೋವೃದ್ಧರಿಗಾಗಿ ವೃದ್ಧಾಶ್ರಮಗಳನ್ನು ನಡೆಸುತ್ತಿದೆಯೇ?*

ಆ) *ಬೆಂಗಳೂರು ನಗರ ಹಾಗೂ ರಾಜ್ಯ ಇನ್ನಿತರ ಸ್ಥಳಗಳಲ್ಲಿರುವ ಇಂತಹ ಸಂಸ್ಥೆಗಳು ಎಷ್ಟು? ಮತ್ತು ಪ್ರತಿಯೊಂದು ಸಂಸ್ಥೆಯ ಸಾಮರ್ಥ್ಯ ಮತ್ತು ನಿವಾಸಿಗಳ ಸಂಖ್ಯೆ ಎಷ್ಟು?*

ಇ) *ದತ್ತಿ ಮೂಲಕ ಮತ್ತು ಸಮಾಜ ಸೇವಾ ಸಂಸ್ಥೆಗಳ ಸಹಾಯದಿಂದ ಸರ್ಕಾರವು ಇಂತಹ ಸಂಸ್ಥೆಗಳನ್ನು ಸ್ಥಾಪಿಸಲು ಪರಿಶೀಲಿಸುತ್ತಿದೆಯೇ?*

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಹೌದು.

ಆ) ಐದು - ವಿವರಗಳು ಈ ಕೆಳಕಂಡಂತೆ ಇವೆ.

	ಸಂಸ್ಥೆಯ ಹೆಸರು	ಸಾಮರ್ಥ್ಯ	ನಿವಾಸಿಗಳ ಸಂಖ್ಯೆ
1)	ಸಮಾಜ ಸೇವಾ ಸಂಕೀರ್ಣ, ಬೆಂಗಳೂರು.	100	48
2)	ಫ್ರಂಡ್ ಇನ್ ನೀಡ್ ಸೊಸೈಟಿ, ಬೆಂಗಳೂರು	44	44
3)	ಛಿಲ್ಡ್ರೆರ್ ಹೋಂ, ಬೆಂಗಳೂರು.	68	68
4)	ಛಿಲ್ಡ್ರೆರ್ ಹೋಂ ಇಂಡಿಯಾ, ಮಂಗಳೂರು.	24	24
5)	ಅಭಯ ಆಶ್ರಯ, ಮಂಗಳೂರು.	87	87

ಇ) ಹೌದು.

ಹಿಂದುಳಿದಿರುವ ಆಂಗ್ಲೋ ಇಂಡಿಯನ್ ಬಗ್ಗೆ.

3747-ಶ್ರೀ ಡೆರಿಕ್ ಎಂ.ಬಿ. ಫುಲಿನ್ ಫಾ (ನಾಮನಿರ್ದೇಶನ ಹೊಂದಿದವರು): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆಂಗ್ಲೋ ಇಂಡಿಯನ್ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಹಿಂದುಳಿದಿರುವಿಕೆಯನ್ನು ಸರ್ಕಾರವು ಗುರ್ತಿಸಿದೆಯೇ?*

ಆ) *ಆಂಗ್ಲೋ ಇಂಡಿಯನ್ ಸಮುದಾಯದ ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳನ್ನು ಸುಧಾರಿಸಲು ಮತ್ತು ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?*

ಇ) *ರಾಜ್ಯ ಸರ್ಕಾರಿ ಕಛೇರಿಯಲ್ಲಿ ಕಂಪನಿಗಳಲ್ಲಿ ನಿಗಮಗಳಲ್ಲಿ ರಾಜ್ಯ ಸರ್ಕಾರದ ಸ್ವಾಮ್ಯಕ್ಕೊಳಪಟ್ಟಿರುವ ಉದ್ಯಮಗಳಲ್ಲಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಎಷ್ಟು ಜನ ಆಂಗ್ಲೋ ಇಂಡಿಯನ್ನರು ಉದ್ಯೋಗದಲ್ಲಿರುತ್ತಾರೆ?*

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಹೌದು.